(ಇಂದು ದಿನಾಂಕಃ 03-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

<u>ಪಾಟೀ ಸವಾಲುಃ ಶ್ರೀ ವಿ.ವಿ.ಸಿ ಎದುರುದಾರ ಪರ ವಕೀಲರಿಂದಃ</u>

1. ಮೈನುದ್ದಿನ ನನ್ನ ಗಂಡ. ಅಪಘಾತ ಆಗಿ ಎರಡು ವರ್ಷ ಆಗಿರುತ್ತದೆ. ಪೊಲೀಸರಿಗೆ ನಾನೇ ದೂರು ಕೊಟ್ಟಿರುತ್ತೇನೆ. ಅಪಘಾತವಾದ ಎಷ್ಟು ದಿನಗಳ ನಂತರ ದೂರು ಕೊಟ್ಟಿರುತ್ತೇನೆ ನನಗೆ ಗೊತ್ತಿಲ್ಲ. ಅಪಘಾತ ಹೇಗೆ ಆಗಿದೆ, ನನ್ನ ಗಂಡ ಎಲ್ಲಿ ಹೊರಟ್ಟಿದ್ದರು ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಅಪಘಾತವು ಯಲ್ಲಮ್ಮಗೇಟ ಹತ್ತಿರವಾಗಿದೆ. ನನ್ನ ಗಂಡ ಆ ದಿನ ನನ್ನ ಅಳಿಯ ಇಮಾಮಸಾಬ ರವರನ್ನು ಕರೆದುಕೊಂಡು ಬರಲು ತೇಲಕೂರಗೆ ಹೋಗಿದ್ದರು. ಸುಲೇಪೇಟನಿಂದ ದ್ವಿಚಕ್ರವಾಹನದ ಮೇಲೆ ನನ್ನ ಗಂಡ ಆ ದಿನ ನನ್ನ ಅಳಿಯ ಇಮಾಮಸಾಬ ರವರನ್ನು ಕರೆದುಕೊಂಡು ಬರಲು ತೇಲಕೂರಗೆ ಹೋಗಿದ್ದರು. ದ್ವಿಚಕ್ರವಾಹನದ ಸಂಖ್ಯೆ. ನನಗೆ ಗೊತ್ತಿಲ್ಲ. ಗಾಡಿ ಗೌಸಪಟೇಲ ತಂದೆ ಜಂಗಶೀದ ಪಟೇಲ ನಡೆಸುತ್ತಿದ್ದರು. ಪೊಲೀಸರಿಗೆ ಹೇಳಿಕೆಯಲ್ಲಿ ಗಾಡಿ ಗೌಸಪಟೇಲ ತಂದೆ ಜಂಗಶೀದ ಪಟೇಲ ನಡೆಸುತ್ತಿದ್ದರು ಎಂದು ಹೇಳಿಕೆ ನಾನೇ ಕೊಟ್ಟಿರುತ್ತೇನೆ. ಇದಾದ ನಂತರ ಮತ್ತೆ ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಅಪಘಾತವಾಗಿ 5 ದಿನಗಳ ನಂತರ ನನ್ನ ಗಂಡ ತೀರಿಕೊಂಡಿರುತ್ತಾರೆ. ನನ್ನ ಗಂಡನನ್ನು ಕಲಬುರಗಿಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ. ನನ್ನ ಗಂಡನನ್ನು ಕಲಬುರಗಿಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಪಿ.ಎಮ್. ವರಿದಿಯ ಪ್ರಕಾರ ದಿಃ31-03-2021 ರಂದು ರಾತ್ರಿ 10.45 ಗಂಟೆ ಸುಮಾರಿಗೆ ಮರಣ ಹೊಂದಿರುತ್ತಾರೆ ಎಂದು ಬರೆದಿದೆ ಎಂದರೆ ಸರಿ. ಪಿ.ಎಮ್. ವರಿದಿಯಲ್ಲಿ ನನ್ನ ಗಂಡನಿಗೆ ಅಪಘಾತವಾಗಿ ಮರಣ ಹೊಂದಿರುತ್ತಾರೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ರಸ್ತೆ ಅಪಘಾತವಾಗಿ ಮರಣ ಹೊಂದಿರುತ್ತಾರೆ ಎಂದು ಬರೆದಿಲ್ಲ, ತಲೆಗೆ ಪೆಟ್ಟಾಗಿ ಮರಣ

ಹೊಂದಿರುತ್ತಾರೆ ಎಂದು ಬರೆಯಲಾಗಿದೆ ಎಂದರೆ ಸರಿ. ದೂರನ್ನು ಹೊರತುಪಡಿಸಿ ನನ್ನ ಗಂಡ ಅಪಘಾತವಾಗಿ ಮರಣ ಹೊಂದಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ಅಪಘಾತವಾದ ನಂತರ ಎನು ಚಿಕಿತ್ಸೆ ಕೊಡಿಸಿರುತ್ತೇನೆ ಮತ್ತು ಅವರಿಗೆ ಹೇಗೆ ಅಪಘಾತವಾಯಿತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ದ್ವಿಚಕ್ರವಾಹನ ಸಂಖ್ಯೆ.KA-32 EZ3116 ವಾಹನದಿಂದ ಅಪಘಾತವಾಗಿಲ್ಲ, ಅವರು ಮರಣ ಹೊಂದಿದ 5 ದಿನಗಳ ನಂತರ ನಾನು ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಯಾವುದೇ ರಸ್ತೆ ಅಪಘಾತವಾಗಿರಲಿಲ್ಲ ಅವರು ಬೇರೆ ಎಲ್ಲಿಯೋ ಬಿದ್ದು ಮರಣ ಹೊಂದಿದ್ದು, ನಾನು ಪರಿಹಾರ ಪಡೆಯಲು 5 ದಿನಗಳ ನಂತರ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ನನ್ನ ಅಳಿಯನಾದ ಇಮಾವಸಾಬ ರವರ ತಂದೆ. ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ರವರ ಅಪಘಾತವಾದಾಗ ಹಾಬಾಳ ಗ್ರಾಮದಲ್ಲಿದ್ದರು, ಅವರನ್ನು ಕರೆದುಕೊಂಡು ಬರಲು ನನ್ನ ಗಂಡ ಹೊಗುತ್ತಿದ್ದರು. ಹಾಬಾಳ ಗ್ರಾಮಕ್ಕೆ ಹೊಗುವ ಮೊದಲು ಈ ಅಪಘಾತವಾಗಿದೆ. ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ಆ ದಿನ ನನ್ನ ಗಂಡನ ಜೊತೆ ಇರಲಿಲ್ಲ ಮತ್ತು ಗಾಡಿ ನಡೆಸುತ್ತಿರಲಿಲ್ಲ. ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ಆ ದಿನ ನನ್ನ ಗಂಡನ ಜೊತೆ ಗಾಡಿ ನಡೆಸುತ್ತಿದ್ದರು ಎಂದು ನಾನು ಹೇಳಿಕೆ ಕೊಟ್ಟಿಲ್ಲ. ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ಆ ದಿನ ನನ್ನ ಗಂಡನ ಜೊತೆ ಗಾಡಿ ನಡೆಸುತ್ತಿರಲಿಲ್ಲ ಎಂದರೆ ಸರಿ. ಆದರೂ ಅವರನ್ನು ಆರೋಪಿಯನ್ನಾಗಿ ಮಾಡಿ ನಾನು ಅವರ ವಿರುದ್ದ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಬಾಬಾಖಾನ ತಂದೆ ಮಹೆಬೂಬಸಾಬ ಖಾನ ನನ್ನ ಅಳಿಯನ ಅಣ್ಣ. ಪೊಲೀಸರಿಗೆ ಬೇರೆ ಯಾರು ಸಾಕ್ಷಿದಾರರ ಹೇಳಿಕೆ ದಾಖಲೆಗಳನ್ನು ನಾನು ಈ ಪ್ರಕರಣದಲ್ಲಿ ಸಲ್ಲಿಸಿಲ್ಲ. ನಾನು ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ಮತ್ತು ಗೌಸ ಪಟೇಲ ರವರ ಚಾಲನಾ ಪರವಾನಿಗೆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಮೇಹಬೂಬ ತಂದೆ

ಯಾಕುಬಸಾಬ ಬಳೆಗಾರ ಮತ್ತು ಗೌಸ ಪಟೇಲ ರವರ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದು ಅವರ ವಿರುದ್ಧ ಅಂತಿಮ ವರದಿ ಪೊಲೀಸರು ಸಲ್ಲಿಸಿರುತ್ತಾರೆ ಎಂದರೆ ಸರಿ.

3. ಆ ದಿನ  ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ಮತ್ತು ಗೌಸ ಪಟೇಲ ರವರ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಆದ್ದರಿಂದ ಇನಶೋರೆನ್ಸ ಕಂಪನಿಯವರು ಪರಿಹಾರ ಹಣ ಕೊಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ.  ಗೌಸ ಪಟೇಲರವರಿಂದ ಮೇಹಬೂಬ ತಂದೆ ಯಾಕುಬಸಾಬ ಬಳೆಗಾರ ಹೇಗೆ ಆರೋಪಿ ಆದರು ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ.

4. ಅಪಘಾತವಾದಾಗ ನನ್ನ ಗಂಡನಿಗೆ 38 ವರ್ಷ ವಯಸ್ಸು ಆಗಿತ್ತು. ಅವರ ಆಧಾರ ಕಾರ್ಡ ಸಲ್ಲಿಸಿಲ್ಲ. ಅವರ ಆಧಾರ ಕಾರ್ಡ ಇದೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ. ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರ ವಯಸ್ಸು ಎಷ್ಟು ಬರೆಸಿರುತ್ತೇನೆ ಎಂದರೆ ಸಾಕ್ಷಿ ಅಡ್ಮಿಟ ಮಾಡಿಸಿದವರು ಬರೇಸಿರುತ್ತಾರೆ ಎಂದು ಹೇಳುತ್ತಾರೆ. ನನಗಿಂತ ನನ್ನ ಗಂಡ 2 ವರ್ಷ ದೊಡ್ಡವರು. ನನ್ನ ಮಗನಿಗೆ 10 ವರ್ಷ ವಯಸ್ಸು. ನನ್ನ ಗಂಡನಿಗೆ 40 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದುಯ, ಪರಿಹಾರ ಪಡೆಯುವ ಉದ್ದೇಶದಿಂದ ಅವನಿಗೆ 38 ವರ್ಷ ವಯಸ್ಸಾಗಿದೆ ಎಂದು ಆಧಾರ ಕಾರ್ಡ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ನಿಜ ವಯಸ್ಸು ಗೊತ್ತಾಗುತ್ತದೆ ಎಂದು ಆಧಾರ ಕಾರ್ಡ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ವಾಚಮನ ಕೆಲಸ ಚಂದಾಪುರದ ಲಿಟಲ್ ಫ್ಲಾವರ ಶಾಲೆಯಲ್ಲಿ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದನು. ನನ್ನ ಗಂಡ ತಿಂಗಳಿಗೆ 15,000/- ಪಡೆಯುತ್ತಿದ್ದನು. ಅವನಿಗೆ ತಿಂಗಳಿಗೆ ಪಗಾರ್ ಕೊಡುತ್ತಿದ್ದನು. ನನ್ನ ಗಂಡನು ಕೆಲಸ ಮಾಡುತ್ತಿದ್ದನು  ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿಲ್ಲ. ನನ್ನ ಗಂಡ ತಿಂಗಳೀಗೆ 15,000/- ಗಳಿಸುತ್ತಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಲೆಲ್ಲರೂ ನನ್ನ ಗಂಡನ ಆದಾಯ ಮೇಲೆ ಅವಲಂಬಿತರಾಗಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

|5. ರಸ್ತೆ ಅಪಘಾತ ಆಗದಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ದ್ವಿಚಕ್ರ ಚಾಲಕನ ವಿರುದ್ದ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರ ಹಣಕ್ಕೆ ಯಾವುದೇ ಆಧಾರವಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.